# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:19/07/2022 ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಾರ್ಯದರ್ಶಿ.
3. ಶ್ರೀ. ಜಿ. ಮೂರ್ತಿ, ಸಹಾಯಕ ಅಭಿಯಂತರರು (ವಿದ್ಯುತ್)
4. ಶ್ರೀಮತಿ. ಶ್ರೀಜಾ, ಸಹಾಯಕ ಅಭಿಯಂತರರು, BWSSB.
5. ಶ್ರೀ. ಪ್ರಕಾಶ್ ಕೆ. ಕಿರಿಯ ಅಭಿಯಂತರರು (ಬೆಸ್ಕಾಂ)
6. ಶ್ರೀ. ಶೌಖತ್ ಅಲಿ ಕಿರಿಯ ಅಭಿಯಂತರರು (ಬೆಸ್ಕಾಂ)
7. ಶ್ರೀ. ಜಿ.ಟಿ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು ವಾರ್ಡ್–153
8. ಶ್ರೀ. ನಾರಾಯಣಸ್ವಾಮಿ, ಮೌಲ್ಯಮಾಪಕರು ವಾರ್ಡ್–153.
9. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
10. ಶ್ರೀ. ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
11. ಶ್ರೀ. ಕಾರ್ತಿಕ್ ಹೆಚ್.ಎಂ, ಮಾರ್ಷಲ್ ವಾರ್ಡ್–153.
12. ಶ್ರೀ. ಮಹದೇವ್ ಎ.ಎಸ್.ಐ ಜಯನಗರ ಸಂಚಾರ ಪೊಲೀಸ್ ಠಾಣೆ.
13. ಶ್ರೀ. ಮಲ್ಲಪ್ಪ ಪೊಲೀಸ್ ಪೇದೆ ಮೈಕೋ ಲೇಔಟ್ ಪೊಲೀಸ್ ಠಾಣೆ.
14. ಶ್ರೀ. ಮಲ್ಲಿಕಾರ್ಜುನ ಗೌಡ, ಜಲ ಪರಿವೀಕ್ಷಕರು BWSSB.
15. ಶ್ರೀ. ಜಿ.ಎಸ್. ಬಾಲಾಜಿ, ಡಾ|| ರಘುನಾಥ್, ಶ್ರೀಮತಿ. ಎಸ್. ಪ್ರೇಮಸುಧಾ, ಡಾ|| ರಾಧಾಕೃಷ್ಣ ಮತ್ತು ಶ್ರೀ. ಕಬೀರ್ ಕಮಲ್, (ಸಾರ್ವಜನಿಕರು).

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಅರಣ್ಯ ಇಲಾಖೆಯ ಅಧಿಕಾರಿಗಳು.
2. ಪೊಲೀಸ್ ಇನ್ಸ್‌ಪೆಕ್ಟರ್ ಬಸವನಗುಡಿ ಸಂಚಾರ ಪೊಲೀಸ್ ಠಾಣೆ.
3. ಪೊಲೀಸ್ ಇನ್ಸ್‌ಪೆಕ್ಟರ್, ಸಿದ್ದಾಪುರ, ತಿಲಕ್‌ನಗರ ಮತ್ತು ಬಸವನಗುಡಿ ಕಾನೂನು ಸುವ್ಯವಸ್ಥೆ.



Scanned with CamScanner

*********

1. ವಾರ್ಡ್–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:19/07/2022 ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ನಿಗದಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿ ದೂರುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು.

3. ವಾರ್ಡಿನ ಸ್ಥಳೀಯರಾದ ಡಾ॥ ರಾಧಾಕೃಷ್ಣ ರವರು ಮಾತನಾಡಿ 7ನೇ ಅಡ್ಡರಸ್ತೆ, ನಂದಿನಿ ಬೂತ್ ಹಿಂಭಾಗ ಇರುವ ಜನರೇಟರ್ ಖಾಲಿ ಡಬ್ಬವನ್ನು ತೆರವುಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಈಗಾಗಲೇ ಸದರಿ ಖಾಲಿ ಡಬ್ಬದ ಮೇಲೆ ನೋಟಿಸ್‌ನ್ನು ಅಂಟಿಸಿ ಸದರಿ ಡಬ್ಬಕ್ಕೆ ಸಂಬಂಧಪಟ್ಟರವರು 10 ದಿನಗಳ ಒಳಗಾಗಿ ಸದರಿ ಡಬ್ಬವನ್ನು ತೆರವುಗೊಳಿಸುವಂತೆ ತಿಳಿಸಲಾಗಿರುತ್ತದೆ. ಆದಾಗ್ಯೂ ಸದರಿ ಡಬ್ಬವನ್ನು ಈ ತಹಲ್‌ವರೆವಿಗೂ ತೆರವುಗೊಳಿಸಿರುವುದಿಲ್ಲ. ಆದ್ದರಿಂದ ಮತ್ತೊಮ್ಮೆ ನೋಟಿಸ್ ಪ್ರತಿಯನ್ನು ಜಾರಿ ಮಾಡಿ ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

ಕ್ರಮ: ವಾರ್ಡ್ ಅಭಿಯಂತರರು

4. ವಾರ್ಡಿನ ಸ್ಥಳೀಯರಾದ ಡಾ॥ ರಾಧಾಕೃಷ್ಣ ರವರು ಮಾತನಾಡಿ ಜಯನಗರ 1ನೇ ಬ್ಲಾಕ್‌ನ 7ನೇ ಅಡ್ಡರಸ್ತೆಯಲ್ಲಿ ನಿವಾಸಿಯಾದ ಸೈಫುಲ್ಲಾ ಎಂಬ ವ್ಯಕ್ತಿಯು ತಮ್ಮ ಹಳೆಯ ಗುಜರಿ ವಾಹನಗಳನ್ನು ರಸ್ತೆಯಲ್ಲಿ ಮತ್ತು ಖಾಲಿ ಜಾಗದಲ್ಲಿ ಹಾಕಿಕೊಂಡಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗುತ್ತಿದ್ದು, ಸದರಿ ಗುಜರಿ ವಾಹನಗಳನ್ನು ತೆರವುಗೊಳಿಸಿಕೊಡುವಂತೆ ಕೋರಿದರು. ಈ ಬಗ್ಗೆ ಸಭೆಯಲ್ಲಿ ಇದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಈಗಾಗಲೇ ಸುಮಾರು ತಿಂಗಳುಗಳ ಹಿಂದೆ ಸದರಿಯವರಿಗೆ ಸದರಿ ಗುಜರಿ ವಾಹನಗಳನ್ನು ತೆರವುಗೊಳಿಸುವಂತೆ ತಿಳಿಸಲಾಗಿರುತ್ತದೆ. ಆದಾಗ್ಯೂ ಸದರಿಯವರು ತೆರವುಗೊಳಿಸಿರುವುದಿಲ್ಲ. ಈ ಬಗ್ಗೆ ಮತ್ತೊಮ್ಮೆ ಸದರಿಯರವರಿಗೆ ಎಚ್ಚರಿಸಿ ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸದರಿ ಮಾಲೀಕರಿಗೆ ಕಂದಾಯ ಇಲಾಖೆಯಿಂದ ನೋಟಿಸ್ ಜಾರಿ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ಕಂದಾಯ ಮೌಲ್ಯಮಾಪಕರಿಗೆ ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು & ಕಂದಾಯ ಮೌಲ್ಯಮಾಪಕರು



Scanned with CamScanner

5. ವಾರ್ಡಿನ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್ ಸುತ್ತಾ-ಮುತ್ತಾ ಒಳಚರಂಡಿ ಸಂಪರ್ಕದ ಪೈಪ್‌ಗಳನ್ನು ಅಳವಡಿಸಿ ರಸ್ತೆಗಳಿಗೆ ಡಾಂಬರೀಕರಣ ಮಾಡಿರುತ್ತಾರೆಂದು ಹರ್ಷ ವ್ಯಕ್ತಪಡಿಸಿ ಸಂಬಂಧಪಟ್ಟ ಇಲಾಖೆಗಳಾದ BBMP & BWSSB ರವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

6. ವಾರ್ಡಿನ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಕಳೆದ ಸುಮಾರು ಸಭೆಗಳಲ್ಲಿ ತಿಳಿಸಿರುವಂತೆ ಮಾಧವನ್ ಪಾರ್ಕ್ ಬಳಿ ನೋ-ಪಾರ್ಕಿಂಗ್ ಬೋರ್ಡ್ ಅಳವಡಿಸುವ ಕುರಿತು ಸಂಬಂಧಪಟ್ಟ ಟ್ರಾಫಿಕ್ ಪೋಲೀಸ್ ರವರಿಗೆ ತಿಳಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಈ ಕುರಿತು ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಪೋಲೀಸ್ ಇಲಾಖೆಯವರಿಗೆ ಪತ್ರ ಬರೆಯುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ನಂತರ ಸಭೆಗೆ ತಡವಾಗಿ ಬಂದ ಜಯನಗರ ಟ್ರಾಫಿಕ್ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರವರಿಗೆ ಈ ಕುರಿತು ಚರ್ಚಿಸಲಾಗಿ ಸದರಿಯವರು ಈಗಾಗಲೇ ಈ ವಿಷಯದ ಕುರಿತು ಪಾಲಿಕೆಯ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಇಲಾಖೆಗೆ ಪತ್ರ ಬರೆಯಲಾಗಿದ್ದು, ಈ ಕುರಿತು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು. ನಂತರ ನೋಡಲ್ ಅಧಕಾರಿಯವರು ಮಾತನಾಡಿ ಈ ವಿಷಯದ ಕುರಿತು ನಮ್ಮ ಕಡೆಯಿಂದ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೆ ಪತ್ರ ಬರೆಯುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು, ಪೋಲೀಸ್ ಇನ್ಸ್‌ಪೆಕ್ಟರ್ ಜಯನಗರ ಪೋಲೀಸ್ ಠಾಣೆ ಹಾಗೂ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್**

7. ವಾರ್ಡಿನ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಕಳೆದ ವಾರ ಸಿದ್ಧಾಪುರ ಪೋಲೀಸ್ ಇನ್ಸ್‌ಪೆಕ್ಟರ್ ರವರ ಅಧ್ಯಕ್ಷತೆಯಲ್ಲಿ ಜಯನಗರ 1ನೇ ಬ್ಲಾಕ್‌ನ ನಿವಾಸಿಗಳೊಂದಿಗೆ ಚರ್ಚೆ ಸಭೆ ನಡೆಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಅದರಂತೆಯೇ ಜಯನಗರ ಟ್ರಾಫಿಕ್ ಇನ್ಸ್‌ಪೆಕ್ಟರ್ ರವರೊಂದಿಗೂ ಸಹ ಜಯನಗರ 1ನೇ ಬ್ಲಾಕ್‌ನ ನಿವಾಸಿಗಳೊಂದಿಗೆ ಸಭೆ ನಡೆಸಿ ಸಮಸ್ಯೆಗಳ ಕುರಿತು ಸಂಪೂರ್ಣವಾಗಿ ಚರ್ಚಿಸುವುದು ಅಗತ್ಯವಾಗಿರುತ್ತದೆ. ಮುಂದುವರೆದು ಪ್ರತಿ ತಿಂಗಳಲ್ಲಿ ಒಂದು ದಿನ ಜಯನಗರ ಸಂಚಾರ ಪೋಲೀಸ್ ಠಾಣೆ ವತಿಯಿಂದ ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳುತ್ತಿದ್ದು, ಸದರಿ ಸಭೆಯ ಮಾಹಿತಿಯನ್ನು ಹಂಚಿಕೊಳ್ಳುತ್ತಿಲ್ಲ. ಆದ್ದರಿಂದ ಮುಂದಿನ ಬಾರಿ ನಡೆಯುವ ಸಭೆಯ ಕುರಿತು ಮಾಹಿತಿಯನ್ನು ಹಂಚಿಕೊಳ್ಳುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಪೋಲೀಸ್ ಇಲಾಖೆಯವರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು.

**ಕ್ರಮ : ಪೋಲೀಸ್ ಇನ್ಸ್‌ಪೆಕ್ಟರ್ ಜಯನಗರ ಪೋಲೀಸ್ ಠಾಣೆ**



Scanned with CamScanner

8. ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಭಿಯಂತರರಿಗೆ ತಾವುಗಳು ವಿದ್ಯುತ್ ತಂತಿಗಳಿಗೆ ಅಡ್ಡಲಾಗಿರುವ ಮರದ ರೆಂಬೆ-ಕೊಂಬೆಗಳನ್ನು ಕತ್ತರಿಸಿ ಅಲ್ಲಿಯೇ ಬಿಟ್ಟು ಬಿಡುತ್ತೀರಿ. ಇದರಿಂದ ಸದರಿ ಜಾಗದಲ್ಲಿ ಕಸ ಹಾಕುವುದು ಪ್ರಾರಂಭವಾಗುತ್ತದೆ. ಆದ್ದರಿಂದ ತಾವು ಸದರಿ ರೆಂಬೆ-ಕೊಂಬೆಗಳನ್ನು ತಮ್ಮ ವತಿಯಿಂದಲೇ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಹಾಗೂ ಪಾದಚಾರಿ ರಸ್ತೆಯಲ್ಲಿಯೇ ತಮ್ಮ ಹಳೆಯ ಪೋಲ್‌ಗಳನ್ನು ಬಿಟ್ಟಿರುತ್ತೀರಿ. ಇವುಗಳನ್ನು ಸಹ ತೆರವುಗೊಳಿಸುವಂತೆ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಬೆಸ್ಕಾಂ) ಜಯನಗರ

9. ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಮಾರ್ಷಲ್ ರವರನ್ನು ಉದ್ದೇಶಿಸಿ ಎಷ್ಟು ದಂಡ ವಿಧಿಸಿರುತ್ತೀರಿ ಹಾಗೂ ತಾವು ಪ್ರತಿ ದಿನ ನಿರ್ವಹಿಸುವ ಕರ್ತವ್ಯದ ಕುರಿತು ಡೈರಿಯನ್ನು ಮುಂದಿನ ಸಭೆಯಲ್ಲಿ ನೀಡುವಂತೆ ತಿಳಿಸಿದರು. ಈ ಕುರಿತು ಮಾರ್ಷಲ್ ರವರು ಮಾತನಾಡಿ ಮುಂದಿನ ಸಭೆಗೆ ಮಾಹಿತಿ ಒದಗಿಸುವುದಾಗಿ ತಿಳಿಸಿದರು.

ಕ್ರಮ : ವಾರ್ಡ್ ಮಾರ್ಷಲ್

10. ವಾರ್ಡ್ 153ರ ಸ್ಥಳೀಯರಾದ ಶ್ರೀ. ಕಮಲ್ ಕಬೀರ್ ರವರು ಮಾತನಾಡಿ ಬಾಲ್ಡ್‌ವಿನ್ ಸ್ಕೂಲ್ ಬಳಿ ಏರ್‌ಟೆಲ್ ರವರು ಪೋಲ್ ಅಳವಡಿಸಿ ಡೆಬ್ರಿಸ್‌ನ್ನು ತೆಗೆಯದೇ ಅಲ್ಲೇ ಬಿಟ್ಟಿರುತ್ತಾರೆ ಇದನ್ನು ತೆರವುಗೊಳಿಸಲು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸದರಿ ಡೆಬ್ರಿಸ್ ತೆರವುಗೊಳಿಸಲು ಸೂಚಿಸಿದರು.

ಕ್ರಮ : ವಾರ್ಡ್ ಅಭಿಯಂತರರು

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

| | |
|---|---|
| (ನವೀನ್‌ಕುಮಾರ್ ಕೆ.) | (ವರಲಕ್ಷ್ಮಮ್ಮ ಎಲ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್-153 ಜಯನಗರ | ವಾರ್ಡ್-153 ಜಯನಗರ |



Scanned with CamScanner